Phone :+91-80-22870060
Fax:+91-80-22875798
dmekarnataka@yahoo.com

ಕರ್ನಾಟಕ ಸರ್ಕಾರ
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
**DIRECTORATE OF MEDICAL EDUCATION**
**BMC&RI (Old Building), 1st Floor, Fort, K.R. Road, Bengaluru-560002.**

DME/JD(PS)/ 43/2023-24 E 1182699 Date: 29.09.2023

**ಸುತ್ತೋಲೆ**

ವಿಷಯ:- ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಅಂಗಾಂಗ ದಾನಕ್ಕೆ NOTTO(National Organ & Tissue Transplant) ವೆಬ್‌ಸೈಟ್‌ನಲ್ಲಿ ನೋಂದಾಯಿಸುವ ಬಗ್ಗೆ

ಉಲ್ಲೇಖ:-
1. Addl. CEO, National Health Authority ರವರ ಅರೆ ಸರ್ಕಾರ ಪತ್ರ ಸಂಖ್ಯೆ D.O No.: S-12019/126/2021- NDHM ದಿನಾಂಕ 04-09-2023 ಮತ್ತು ಇ-ಮೇಲ್ ಸಂದೇಶ ದಿನಾಂಕ 04-09-2023 ಹಾಗೂ 05-09-2023.
2. ಆ.ಕು.ಕ ಸೇವೆಗಳ ನಿರ್ದೇಶನಾಲಯ ಪತ್ರ ಸಂಖ್ಯೆ JDM/SOTTO(JSK)/19/2021-22 ದಿನಾಂಕ 21.09.2023

*****

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆಯುಷ್ಮಾನ್ ಭವ ಆರೋಗ್ಯ ಮೇಳಗಳ ಅಂಗವಾಗಿ ಮೇಳದಲ್ಲಿ ಅಂಗಾಂಗ ದಾನದ ಮಹತ್ವವನ್ನು (**ಅಂಗದಾನ ಮಹೋತ್ಸವ 17 ಸೆಪ್ಟೆಂಬರ್ 2023 ರಿಂದ 02 ಅಕ್ಟೋಬರ್ 2023ರವರೆಗೆ**) ಕೂಡ ಪ್ರಚಾರ ಮಾಡಲಾಗುತ್ತಿದೆ ಮತ್ತು ಅಂಗಾಂಗ ದಾನಕ್ಕೆ, ಪ್ರತಿಜ್ಞೆ ಮಾಡುವವರನ್ನು ಸ್ಥಳದಲ್ಲಿಯ ಪ್ರೋತ್ಸಾಹಿಸಲು ಈ ಮೂಲಕ ತಿಳಿಸಿದೆ.

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಭಿಯಾನದ ಆಯುಷ್ಮಾನ್ ಭವ ಡಿಜಿಟಲ್ ಮಿಷನ್ (ABDM) ಅಡಿಯಲ್ಲಿ ಕೆಳಗೆ ಲಗತ್ತಿಸಿರುವ NOTTO Website ಲಿಂಕ್ ಮುಖಾಂತರ ಅಂಗಾಂಗ ದಾನಕ್ಕೆ ನೋಂದಾಯಿಸಲು ತಿಳಿಸಿದೆ. ಕೇಂದ್ರ ಸರ್ಕಾರವು ಅಂಗಾಂಗ ದಾನ ನೋಂದಣಿಗೆ ವಿಶೇಷ ಮಹತ್ವ ನೀಡಿದ್ದು, ಕರ್ನಾಟಕ ರಾಜ್ಯವು ಅಂಗಾಂಗ ದಾನ ನೋಂದಣಿಯಲ್ಲಿ ಮುಂಚೂಣಿಯಲ್ಲಿರಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಎಲ್ಲಾ ವೈದ್ಯಕೀಯ ಮಹಾವಿದ್ಯಾಲಯಗಳ ಬೋಧಕರು - ಸಿಬ್ಬಂದಿ ವರ್ಗದವರು ಅಂಗಾಂಗ ದಾನಕ್ಕೆ ಕೈಜೋಡಿಸಿ ಅಂಗಾಂಗ ದಾನ ಪ್ರತಿಜ್ಞೆ ಕೈಗೊಂಡು ಸಹಕರಿಸಲು ಈ ಮೂಲಕ ಕೋರಲಾಗಿದೆ.

ವಿ.ಸೂ: 1) ಮೊಬೈಲ್ ಸಂಖ್ಯೆಯು ಆಧಾರ್ ಜೋಡಣೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
2) ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸಿದ ಮೂಲ- Institute→SOTTO Karnataka ಎಂದು ನಮೂದಿಸುವುದು

NOTTO website ಲಿಂಕ್ https://notto.abdm.gov.in/.

**ನಿರ್ದೇಶಕರು,**
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.

ಗೆ,
ನಿರ್ದೇಶಕರು,
ಎಲ್ಲಾ ಸರ್ಕಾರಿ, ಸ್ವಾಯತ್ತ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು/ಸಂಸ್ಥೆಗಳು,
ಕರ್ನಾಟಕ ರಾಜ್ಯ

ಪ್ರತಿಯನ್ನು ಮಾಹಿತಿಗಾಗಿ:-
1. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆ.ಕು.ಕ ಸೇವೆಗಳು, ಬೆಂಗಳೂರು.